# ಕೇಶವ ಮಾಧವ ಗೋವಿಂದ ವಿಠಲೆಂಬ ದಾಸಯ್ಯ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The wordings are mainly as per Ref. 1. The lyrics matches with the singer. Few differences of the wordings in Ref. 2 above are given in green highlights.

ರಾಗ ಸೌರಾಷ್ಟ್ರ ತಾಳ ಅಟ್ಟ

ಕೇಶವ ಮಾಧವ ಗೋವಿಂದ ವಿಠ್ಠಲೆಂಬ ದಾಸಯ್ಯ ಬಂದ ಕಾಣೆ ॥ ಪ ॥
ದೋಷರಹಿತ ನರವೇಷವ ಧರಿಸಿದ ದಾಸಯ್ಯ ಬಂದ ಕಾಣೆ ॥ ಅಪ ॥

ಖಳನು ವೇದವನೊಯ್ಯೆ ಪೊಳೆವ ಕಾಯನಾದ ದಾಸಯ್ಯ ಬಂದ ಕಾಣೆ
ಘಳಿಲನೆ ಕೂರ್ಮ ತಾನಾಗಿ ಗಿರಿಯ ಪೊತ್ತ ದಾಸಯ್ಯ ಬಂದ ಕಾಣೆ
ಇಳೆಯ ಕದ್ದಾಸುರನ ಕೋರೆ ದಾಡಿಲಿ (ಕೊಂದ) (ಅಳಿದ) ದಾಸಯ್ಯ ಬಂದ ಕಾಣೆ
ಛಲದಿ ಕಂಭದಿ ಬಂದು ಅಸುರನ ಸೀಳಿದ ದಾಸಯ್ಯ ಬಂದ ಕಾಣೆ ॥ ೧ ॥

ಬಲಿಯ ದಾನವ ಬೇಡಿ ನೆಲವನಳೆದು ನಿಂದ ದಾಸಯ್ಯ ಬಂದ ಕಾಣೆ
(ಮಲೆತ) (ಛಲದಿ) ಕ್ಷತ್ರಿಯರ ಕುಲವ ಸಂಹರಿಸಿದ ದಾಸಯ್ಯ ಬಂದ ಕಾಣೆ
ಲಲನೆಯನೊಯ್ಯೆ ತಾ ತಲೆ ಹತ್ತಾರನು ಕೊಂದ ದಾಸಯ್ಯ ಬಂದ ಕಾಣೆ
ನೆಲಕ್ಕೊತ್ತಿ ಕಂಸನ ಬಲವನಳಿದ ಮುದ್ದು ದಾಸಯ್ಯ ಬಂದ ಕಾಣೆ ॥ ೨ ॥

ಪುಂಡತನದಿ ಪೋಗಿ ಪುರವನುರುಪಿ ಬಂದ ದಾಸಯ್ಯ ಬಂದ ಕಾಣೆ
ಲಂಡರ ಸದೆಯಲು ತುರಗವನೇರಿದ ದಾಸಯ್ಯ ಬಂದ ಕಾಣೆ
ಹಿಂಡು ವೇದಗಳೆಲ್ಲ ಅರಸಿ ನೋಡಲು ಸಿಗದ ದಾಸಯ್ಯ ಬಂದ ಕಾಣೆ
ಪಾಂಡುರಂಗ ನಮ್ಮ ಪುರಂದರ ವಿಠಲ ದಾಸಯ್ಯ ಬಂದ ಕಾಣೆ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ಅವತಾರಗಳು ಮನುಷ್ಯರೂಪದಿಂದ ಇದ್ದರೂ, ಪ್ರಾಕೃತವಾದ ದೋಷಗಳ ಸಂಬಂಧವಿಲ್ಲದೆ ಅವನದ್ದು ದಿವ್ಯ ದೇಹ; ಶುಕ್ರಶೋಣಿತಗಳಿಂದ ಉಂಟಾದ ಅಥವಾ ವಿಕಾರಗಳಿಗೆ ಪಕ್ಕಾಗುವಂಥ ಶರೀರವಲ್ಲ. ಅವನ ಅವತಾರಗಳು ಲೀಲಾ ಮಾತ್ರ. ಶ್ರೀ ಹರಿಯನ್ನು ದಾಸರ ದಾಸನೆಂದು ಭಾವಿಸಿ ಆ ಸ್ವರೂಪದಿಂದ ಬಂದನೆಂದು ದಶಾವತಾರದ ವರ್ಣನೆಯೊಂದಿಗೆ ದಾಸರು ಇಲ್ಲಿ ಹಾಡಿದ್ದಾರೆ.

**ಪೊಳೆವ ಕಾಯ** = ಮೀನ, ಮತ್ಸ್ಯಾವತಾರ

**ತಲೆಹತ್ತು** = ರಾವಣ

**ಪುರವನುರೂಪಿ ಬಂದ** = ತ್ರಿಪುರರ ನಾಶ ಮಾಡಿ ಬಂದ.

**ದಾಸಯ್ಯ** – ದಾಸರ ಅಯ್ಯ, ಒಡೆಯ; ಆರಾಧ್ಯ ದೈವ.

**ಬಂದ** – ಭೂಮಿಯ ಮೇಲೆ ತೋರಿಕೊಂಡ.

**ಕಾಣೆ** – ಬಂದುದನ್ನು ಕಾಣೆಯಾ? ಅರಿಯೆಯಾ?

**Classification:** Keerthane
**Ankita:** purandara vittala
**Location:** NA
**Category:** Dashavatara
**Group Words:** Vishnu, keshava, Madhava, nara, veda, bhumi, sura, asura, dana, kamsa, kudure, panduranga, dashavatara,
**Pravachana:** NA
**Explanation:** NA